# ಹೊನ್ನಾವರದ 'ರಾಣಿ'ಯರು!

ಉತ್ತರ ಕನ್ನಡದ ಹೊನ್ನಾವರದ ಬಹುತೇಕ ಎಲ್ಲ ತೋಟಿಗರ ಮನೆಗಳಲ್ಲಿ 'ರಾಣಿ'ಯರು ಇದ್ದೇ ಇರುತ್ತಾರೆ.

■ ಚಿತ್ರ–ಲೇಖನ: **ಕೃಷ್ಣಿ ಶಿರೂರ**





ಭಾರತದಿಂದ ಪಾಕಿಸ್ತಾನದ ಕರಾಚಿಗೆ ಓಡಾಡುತ್ತಿದ್ದ ಬಸ್ (1999ರ ಆಸುಪಾಸು) ಮೂಲಕವೇ ಹೊನ್ನಾವರದ 'ರಾಣಿ'ಯರು ಕರಾಚಿ ತಲುಪುತ್ತಿದ್ದರು! ರಾಣಿಯರೆಂದರೆ ಚೆಲುವೆಯರ ಹಾಗೆ ಮೈಮಾಟ ಹೊಂದಿರುವ ಎಲೆಗಳು!

ರಾಣಿ ಎಲೆಗಳಿಗೆ ಪಾಕಿಸ್ತಾನದಲ್ಲಿ ಬೇಡಿಕೆ ಹೆಚ್ಚಿದ್ದರಿಂದ ದರವೂ ಹೆಚ್ಚೇ ಇತ್ತು. ಹೀಗಾಗಿ ಉತ್ತರ ಕನ್ನಡದ ಕರಾವಳಿಯ ಹೊನ್ನಾವರದಲ್ಲಿ ಬಹುತೇಕ ಎಲ್ಲ ತೋಟಿಗರ ಮನೆಯ ಅಡಿಕೆ ತೋಟದಲ್ಲಿ, ಪ್ರತಿ ಅಡಿಕೆ ಮರಗಳ ಆಶ್ರಯಿಸಿ ಮೇಲೇರಿದ ಎಲೆಬಳ್ಳಿಗಳಲ್ಲಿ ಒತ್ತಾಗಿ ಹಿಡಿದ ವೀಳ್ಯದೆಲೆಗಳ ಸೊಬಗಿತ್ತು. ತಿಳಿ ಹಸಿರಿನಿಂದ ತುಸು ಗಾಢ ಹಸಿರಿನೊಂದಿಗೆ ಕಂಗೊಳಿಸುವ ಎಲೆ ಬಳ್ಳಿಗಳು ಅಡಿಕೆ ತೋಟಕ್ಕೆ ಒಂದು ಶೋಭೆ ಎಂದರೆ ತಪ್ಪಾಗಲಾರದು.

'ಒಂದೂ ಚುಕ್ಕಿ ಇಲ್ಲದ ಪರಿಶುದ್ಧ ಎಲೆಗಳೇ ನಮ್ಮ ಹೊನ್ನಾವರದ ರಾಣಿ ಎಲೆಗಳು. ಒಂಚೂರೂ ಭಿನ್ನವಿರದ, ಒಂದೇ ಅಳತೆಯ 'ರಾಣಿ'ಯರು ನೆರೆಯ ಪಾಕಿಸ್ತಾನ ಹಾಗೂ ಸಾಗರ ದಾಟಿ ದೂರದ ದುಬೈಗೂ ಹಾರಿದ್ದಾರೆ. ಈಗಲೂ ಅರಬ್ ದೇಶಗಳಲ್ಲಿ ರಾಣಿ ಎಲೆಗಳಿಗೆ ಹೆಚ್ಚು ಬೇಡಿಕೆ ಇದೆ' ಎನ್ನುತ್ತಾರೆ ರಾಣೆಬೆನ್ನೂರಿನ ವೀಳ್ಯದೆಲೆ ಮಾರುಕಟ್ಟೆಯ ಮಧ್ಯವರ್ತಿಗಳು.

(8ನೇ ಪುಟ ನೋಡಿ)